ಕುಂದಾಪುರ ಕೋಡಿಯ ಸಮುದ್ರ ತಡೆಗೋಡೆ ನಿರ್ಮಿಸುವುದು:

1030 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ. (ಕುಂದಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕುಂದಾಪುರ ಕೋಡಿಯ ಸಮುದ್ರ ತಡೆಗೋಡೆ ನಿರ್ಮಿಸಲು ಟೆಂಡರು ಕರೆದಿದ್ದರೂ ಸಹ ಈ ತನಕ ಕೆಲಸ ಮಾಡದಿರಲು ಕಾರಣವೇನು?

ಆ) ಈ ಕೆಲಸವನ್ನು ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಕಾಮಗಾರಿಯ ಸ್ಥಳಕ್ಕೆ ರಸ್ತೆ ಸಂಪರ್ಕವು ಮಳೆಯಿಂದಾಗಿ ಸಂಪೂರ್ಣ ಕೊರೆದು ಹೋದುದರಿಂದ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಲಿಲ್ಲ.

ಆ) ಮುಂಬರುವ ಮುಂಗಾರಿನೊಳಗೆ ಮುಗಿಸಲು ಎಲ್ಲಾ ಪ್ರಯತ್ನ ಮಾಡಲಾಗುವುದು.

1991ನೇ ವರ್ಷವನ್ನು ಭಾರತ ಸಂದರ್ಶನ ವರ್ಷವೆಂದು ಕೇಂದ್ರ ಸರ್ಕಾರ ಘೋಷಿಸಿರುವುದು

1006 - ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ನೇ ವರ್ಷವನ್ನು ಭಾರತ ಸಂದರ್ಶನ ವರ್ಷವೆಂದು ಕೇಂದ್ರ ಸರ್ಕಾರ ಘೋಷಿಸಿದೆಯೇ ?

ಆ) ಘೋಷಿಸಿದ್ದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ವರ್ಷದಲ್ಲಿ ಕೇಂದ್ರ ಸರ್ಕಾರ ಪ್ರವಾಸಿಗರನ್ನು ಆಕರ್ಷಿಸಲು ರಾಜ್ಯಕ್ಕೆ ಕೊಟ್ಟಿರುವ ಸೌಲಭ್ಯಗಳೇನು?

ಈ) 1989-90ನೇ ಸಾಲಿನಲ್ಲಿ ರಾಜ್ಯಕ್ಕೆ ಬಂದ ಪ್ರವಾಸಿಗರ ಸಂಖ್ಯೆ ಮತ್ತು ಪ್ರಸ್ತುತ ವರ್ಷ ಬಂದಿರುವ ಪ್ರವಾಸಿಗರ ಸಂಖ್ಯೆ ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) ಹೌದು.

1. ಈಗಾಗಲೇ ಕೈಗೊಂಡಿರುವ ಹೆದ್ದಾರಿ ಸೌಲಭ್ಯಗಳನ್ನು ಮತ್ತಿತರ ವಸತಿ ಸೌಖರ್ಯ, ಕಟ್ಟಡಗಳನ್ನು ಸಜ್ಜುಗೊಳಿಸಲಾಗುವುದು.

2. ಮೈಸೂರು ದಸರಾ, ಹಂಪಿ ಮತ್ತು ಬಿಜಾಪುರದಲ್ಲಿ ಸಾಂಸ್ಕೃತಿಕ ಉತ್ಸವವನ್ನು ಹೆಚ್ಚಿನ ಪ್ರಮಾಣದಲ್ಲಿ ಹಾಗೂ ಹೊಸದಾಗಿ ಕರಾವಳಿಯಲ್ಲಿ ಕರಾವಳಿಯ ಉತ್ಸವ ಆಚರಿಸುವುದು.

3.ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯವನ್ನು ತ್ವರಿತಗೊಳಿಸಲಾಗುವುದು.

4. ನಿಯೋಜಿತ ಪ್ರವಾಸಿಗರಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು 5 ಹೊಸ ಬಸ್ಸುಗಳನ್ನು ಖರೀದಿಸಿ ಆ ಅವಧಿಯಲ್ಲಿ ಪ್ರವಾಸಿಗರಿಗಾಗಿ ಉಪಯೋಗಿಸುವುದು.

ಆ. ಕೇಂದ್ರ ಸರ್ಕಾರವು ಕರ್ನಾಟಕದ ಕರಾವಳಿ ಮತ್ತು ಬಿಜಾಪುರ ಪಟ್ಟದಕಲ್ಲು ಉತ್ಸವಗಳ ಆಚರಣೆಗಾಗಿ 9.6 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ.

ಇ. ಕೇಂದ್ರದ ಸಮಪಾಲು ವೆಚ್ಚದೊಂದಿಗೆ ಕರ್ನಾಟಕದ ಬಗ್ಗೆ ಆಡಿಯೋ ವಿಜುಯಲ್ ಕಾರ್ಯಕ್ರಮ ತಯಾರಿಸಲಾಗುತ್ತಿದೆ.

ಇ) ಕರ್ನಾಟಕದಲ್ಲಿ ಗುರುತಿಸಿರುವ ಪ್ರವಾಸಿ ಕೇಂದ್ರಗಳ ಬಗ್ಗೆ ಬಿತ್ತಿಪತ್ರ ಮತ್ತು ಪ್ರವಾಸಿ ಮಡಿಕೆಗಳನ್ನು ಹೊರತಂದಿರುತ್ತಾರೆ. 1989-90ನೇ ಸಾಲಿನಲ್ಲಿ ಕರ್ನಾಟಕಕ್ಕೆ ಭೇಟಿ ಇತ್ತ ಪ್ರವಾಸಿಗರ ಸಂಖ್ಯೆ 2.40 ಕೋಟಿ ಆಗಿರುತ್ತದೆ. 1990-91ರ ಸಂಖ್ಯೆಯು ಇನ್ನು ಲಭ್ಯವಿರುವುದಿಲ್ಲ.

ರಾಜ್ಯದ ಕೆ.ಇ.ಬಿ.ಯಲ್ಲಿ ವಿದ್ಯುತ್ ಉಪಕರಣ ಸಾಮಗ್ರಿಗಳ ಕೊರತೆ

626-ಶ್ರೀ ಹರ್ಷ ಕುಮಾರ್ ಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ಆದಾಯವೆಷ್ಟು?

ಆ) ರಾಜ್ಯದ ಕೆಇಬಿ, ವಿದ್ಯುತ್ ಉಪಕರಣ ಸಾಮಗ್ರಿಗಳ ಕೊರತೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಉಪಕರಣ ಸಾಮಗ್ರಿಗಳ ಕೊರತೆ ನೀಗಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಈ) ಮೈಸೂರು ಜಿಲ್ಲೆಗೆ ವರ್ಷ ಒಂದಕ್ಕೆ ವಿದ್ಯುತ್ ಉಪಕರಣ ಸಾಮಗ್ರಿಗಳನ್ನು ಒದಗಿಸಲು ಬೇಕಾಗುವ ಹಣದ ಪ್ರಮಾಣವೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1989-90ನೇ ಸಾಲಿನಲ್ಲಿ ಮಂಡಳಿಯ ಒಟ್ಟು ಆದಾಯ ಸುಮಾರು 784.12 ಕೋಟಿ ರೂಪಾಯಿಗಳು (ಇನ್ನೂ ಆಡಿಟ್ ಆಗಿಲ್ಲ).

ಆ) ಬಂದಿದೆ.

ಇ) ಇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಹಾಕಿಕೊಂಡಿರುವ ಗುರಿಯನ್ನು ಸಾಧಿಸಲು ಅಗತ್ಯವಿರುವ ಎಲ್ಲಾ ಉಪಕರಣಗಳನ್ನು ಒದಗಿಸಲು ಕ್ರಮ ತೆಗೆದುಕೊಂಡಿದೆ.

ಈ) ಸುಮಾರು 7.50 ಕೋಟಿ ರೂ.ಗಳು.

ಹಾಸನದಲ್ಲಿರುವ ಇಂಪ್ಲಿಮೆಂಟ್ ಫ್ಯಾಕ್ಟರಿಯ ಬಗ್ಗೆ

1064 : ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದಲ್ಲಿರುವ ಇಂಪ್ಲಿಮೆಂಟ್ ಫ್ಯಾಕ್ಟರಿಯು ಪ್ರಾರಂಭವಾದುದು ಯಾವಾಗ? ಯಾವ ಉದ್ದೇಶಕ್ಕಾಗಿ ಪ್ರಾರಂಭಿಸಲ್ಪಟ್ಟಿತು?

ಆ) ಈ ಕಾರ್ಖಾನೆಯನ್ನು ಕಿಂಕೋಗೆ ಯಾವಾಗ ವಹಿಸಲಾಯಿತು?

ಇ) ಕಿಂಕೋ ಅಡಳಿತ ಕಾಲದಲ್ಲಿ ಕಾರ್ಖಾನೆಯು ಯಾವ ಪದಾರ್ಥಗಳನ್ನು ತಯಾರಿಸುತ್ತಿತ್ತು? ಅದು ಲಾಭದಲ್ಲಿದೆಯೆ ಅಥವಾ ನಷ್ಟದಲ್ಲಿದೆಯೆ (ವಿವರ ಕೊಡಿ)

ಈ) ಈ ಕಾರ್ಖಾನೆಯು ಈಗ ಉತ್ಪಾದಿಸುತ್ತಿರುವ ವಸ್ತುಗಳು ಯಾವುವು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹಾಸನದಲ್ಲಿ ಮೈಸೂರು ಇಂಪ್ಲಿಮೆಂಟ್ಸ್ ಕಾರ್ಖಾನೆಯನ್ನು 1939-40ರಲ್ಲಿ ಪ್ರಾರಂಭಿಸಲಾಯಿತು. ಈ ಕಾರ್ಖಾನೆಯ ಪ್ರಾರಂಭ ಉದ್ದೇಶವೇನೆಂದರೆ ರೈತ ಸಮುದಾಯಕ್ಕೆ ಅವಶ್ಯಕವಿರುವ ಗುಣಮಟ್ಟದ ಬೇಸಾಯದ ಸಲಕರಣೆಗಳನ್ನು ಹಾಗೂ ಇನ್ನಿತರ ಸಾಮಾಗ್ರಿಗಳನ್ನು ಸಮರ್ಪಕ ಬೆಲೆಗೆ ನೀಡುವುದು.

ಆ) ದಿನಾಂಕ 1.8.1976 ರಂದು.